

# ಹೇಳುವುದು ಹೇಗೆ ಕರಾಳ ಕಥೆಗಳ?

## ಶ್ರುತಿ ಹರಿಹರನ್

‘ಪಾತ್ರಕ್ಕಾಗಿ ಪಲ್ಲಂಗ’ (ಕ್ಯಾಸ್ಟಿಂಗ್ ಕೌಚ್) ಚಿತ್ರರಂಗದಲ್ಲಿದೆ ಎಂದು ದನಿಯೆತ್ತಿ ಹೇಳಿದ ಮೊದಲಿಗರಲ್ಲಿ ಕನ್ನಡ ಸಿನಿಮಾ ನಟಿ ಶ್ರುತಿ ಹರಿಹರನ್ ಕೂಡ ಒಬ್ಬರು. ‘ವಿಸ್ಮಯ’ ಸಿನಿಮಾದ ಚಿತ್ರೀಕರಣದ ಸಮಯದಲ್ಲಿ ತಾವು ಅನುಭವಿಸಿದ ಅಹಿತಕರ ಪ್ರಸಂಗವನ್ನು ಅವರು ಇಲ್ಲಿ ನೆನಪಿಸಿಕೊಂಡಿದ್ದಾರೆ.

### ‘ಮಿ ಟೂ’ ಒಂದು ಗೇಮ್ ಚೇಂಜರ್ ಅಭಿಯಾನ.....

‘ಇಲ್ಲಿಯವರೆಗೆ ಆಗಿದ್ದು ಆಗಿಹೋಯ್ತು. ಹೆಣ್ಣು ಕೇವಲ ಲೈಂಗಿಕ ಸಲಕರಣೆ ಎಂಬ ಪುರುಷಪ್ರಧಾನ ದೃಷ್ಟಿಕೋನವನ್ನು ಇನ್ನೊಂದು ಕ್ಷಣವೂ ಸಹಿಸಿಕೊಳ್ಳಲಾರೆವು’ ಎಂದು ಸ್ಫೋಟಗೊಂಡ ಪ್ರತಿಭಟನೆಯ ಅಭಿಯಾನ. ತಲೆಮಾರುಗಳಿಂದ ಹೆಣ್ಣನ್ನು ಅಬಲೆ ಎಂದು ಬಿಂಬಿಸಿ, ಅವಳನ್ನು ಪುರುಷಸಮಾಜ ಶೋಷಿಸುತ್ತಲೇ ಬಂದಿದೆ. ಆ ವೇದನೆಯೇ ಈಗ ‘ಮಿ ಟೂ’ ರೂಪದಲ್ಲಿ ಸ್ಫೋಟಗೊಂಡಿದೆ. ಇದು ಆಕ್ರೋಶದ ಆಸ್ಫೋಟ.

ಹೆಣ್ಣಿನ ಶೋಷಣೆಗೆ ಕಾರಣವಾಗಿರುವ ಪುರುಷ ಅಹಂಕಾರವನ್ನು ಪೋಷಿಸುವಂಥ ಸಂಗತಿಗಳು ಹೆಣ್ಣಾದ ತನ್ನಿಂದಲೇ ಜರುಗುತ್ತಿವೆ ಎಂಬ ಎಚ್ಚರ ಮತ್ತು ಅದಕ್ಕೆ ಇನ್ನೆಂದೂ ಅವಕಾಶ ಕೊಡಲಾರೆ ಎಂಬ ಅರಿವು ಮೂಡಿದ್ದರ ರೂಪಕವಾಗಿಯೂ ‘ಮಿ ಟೂ’ ಅಭಿಯಾನವನ್ನು ನೋಡಬೇಕು. ‘ಅಧಿಕಾರ’ ಅಥವಾ ‘ಪವರ್’ ಅನ್ನುವುದನ್ನು ವ್ಯಾಖ್ಯಾನಿಸುತ್ತಿದ್ದ ಕ್ರಮವನ್ನೇ ಈ ಅಭಿಯಾನ ಮುರಿದಿದೆ.

ತಾನು ಪ್ರಬಲ, ಹೆಣ್ಣು ತನ್ನ ಅಡಿಯಾಳು ಎಂಬ ಭ್ರಮೆ ಪುರುಷನಿಗೆ ಬಂದಿದ್ದು ಎಲ್ಲಿಂದ? ಅವಳು ತನ್ನನ್ನು ಪ್ರಶ್ನಿಸುವುದಿಲ್ಲ–ಪ್ರತಿರೋಧಿಸುವುದಿಲ್ಲ ಎಂಬ ನಂಬಿಕೆಯೇ ಅವನ ಈ ಅಧಿಕಾರದ ಮೂಲ. ಇದು ನಿಜವಾಗಲೂ ಅವನಿಗೆ ಇರುವ ಅಧಿಕಾರವೇನಲ್ಲ; ಅವನು ‘ಇದೆ’ ಎಂದು ಭ್ರಮಿಸಿಕೊಂಡಿರುವ ಅಧಿಕಾರ. ಈ ಭ್ರಮಾಧಿಕಾರದ ಕಾರಣದಿಂದ ದೈಹಿಕವಾಗಿ ಅಥವಾ ಮಾನಸಿಕವಾಗಿ ಇನ್ನೊಬ್ಬ ಮನುಷ್ಯನಿಗೆ ನೋವುಂಟುಮಾಡುವುದು ನಿಜಕ್ಕೂ ಅಮಾನವೀಯ. ಅದರಲ್ಲಿಯೂ ಹೆಣ್ಣಿನ ಮೇಲೆ ನಡೆಯುವ ಕ್ರೌರ್ಯ–ಶೋಷಣೆಗಳು ಆತಂಕಹುಟ್ಟಿಸುತ್ತವೆ.

ಲೈಂಗಿಕ ಶೋಷಣೆಯ ಅನುಭವ ಮನಸ್ಸಿನ ಮೇಲೆ ಮಾಡುವ ಆಘಾತದಿಂದ ಹೊರಗೆ ಬರುವುದು ಸುಲಭವಲ್ಲ. ಅದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಇಂಥ ಅನುಭವಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಹಂಚಿಕೊಳ್ಳುವುದಕ್ಕಂತೂ ತುಂಬಾನೇ ಧೈರ್ಯ ಬೇಕು. ಅದರಲ್ಲಿಯೂ ತನ್ನನ್ನು ಶೋಷಿಸಿದ ವ್ಯಕ್ತಿಯ ಹೆಸರನ್ನು ಹೇಳುವುದಿದೆಯಲ್ಲ, ಅದು ಖಂಡಿತ ಸಣ್ಣ ವಿಷಯ ಅಲ್ಲವೇ ಅಲ್ಲ.



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450